ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 01 ಸಿಡಿಸಿ (2) 2017-18 /820

ನಿರ್ದೇಶಕರ ಕಛೇರಿ
ಅರಮನೆ ರಸ್ತೆ
ಬೆಂಗಳೂರು 560 001
ದಿ: 30-05-2018

**-:ಸುತ್ತೋಲೆ:-**

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ ಇಲ್ಲಿ NITTTR, Kolkata ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಕ್ಕೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಪ್ರಾಚಾರ್ಯರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ ಇವರ ಪತ್ರ ಸಂ:ಸಇಕಾಹಾ/06/ಇಎಸ್‌ಟಿ/2017-18, ದಿನಾಂಕ:08-05-2018.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ NITTTR, Kolkata ಇವರ ಸಹಯೋಗದೊಂದಿಗೆ ದಿನಾಂಕ:11-06-2018 ರಿಂದ ದಿನಾಂಕ:15-06-2018ರವರೆಗೆ "Elements of Vibration Analysis" ಎಂಬ ವಿಷಯದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ, ಇಲ್ಲಿ ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಸದರಿ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಸಂಸ್ಥೆಯಲ್ಲಿ ಆಯೋಜಿಸಲು ಅನುಮತಿ ನೀಡಲಾಗಿದೆ.

ಸದರಿ ಅಲ್ಪಾವಧಿ ತರಬೇತಿಗೆ ಹಾಜರಾಗಲು ಇಚ್ಚಿಸುವ ಬೋಧಕ ಸಿಬ್ಬಂದಿ ವರ್ಗದವರು, ತರಬೇತಿಗೆ ಅರ್ಜಿ ಸಲ್ಲಿಸಿ ನೊಂದಾಯಿಸಿಕೊಳ್ಳುವ ಸಲುವಾಗಿ ಸಂಯೋಜನಾಧಿಕಾರಿಯಾದ ಶ್ರೀ ವಿಶಾಲ ಗೌಡ ಎಸ್ ಪಾಟೀಲ್ ಸಹಾಯಕ ಪ್ರಾಧ್ಯಾಪಕರು, ಯಾಂತ್ರಿಕ ವಿಭಾಗ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ, ಇವರನ್ನು ಮೊಬೈಲ್ ಸಂಖ್ಯೆ: 9740101996 ಅಥವಾ ಈ-ಮೇಲ್ ಐಡಿ vishalspatil2008@gmail.com ಮೂಲಕ ಸಂಪರ್ಕಿಸಲು ಸೂಚಿಸಲಾಗಿದೆ.

ತರಬೇತಿಯನ್ನು ಆಯೋಜಿಸಿರುವ ಸಂಸ್ಥೆಯ ಪ್ರಾಚಾರ್ಯರು, ತರಬೇತಿಗೆ ಆಯ್ಕೆಗೊಂಡ ಸರ್ಕಾರಿ/ಅನುದಾನಿತ ಸಂಸ್ಥೆಗಳ ಬೋಧಕ ಸಿಬ್ಬಂದಿ ವರ್ಗದವರ ಪಟ್ಟಿಗೆ ದಿನಾಂಕ:07-06-2018ರೊಳಗಾಗಿ ನಿರ್ದೇಶನಾಲಯದ ಅನುಮೋದನೆ ಪಡೆದು ತರಬೇತಿ ನಡೆಸಲು ಸೂಚಿಸಲಾಗಿದೆ. ಈ ಅಲ್ಪಾವಧಿ ತರಬೇತಿಗೆ ಇಲಾಖೆಯಿಂದ ಯಾವುದೇ ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳನ್ನು ನೀಡುವುದಿಲ್ಲ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:- ಪ್ರಾಚಾರ್ಯರು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:-
1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ/ಇನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.